## ೪. ಭಗಿನೀ ಸುನಂದಾದೇವಿ (ಕನಕ)



ಮೈಸೂರು ರಾಜ್ಯದಲ್ಲಿ ರಾಮಕೃಷ್ಣ ಆಂದೋಳನವನ್ನು ಹುಟ್ಟುಹಾಕಿದವರಲ್ಲಿ ಡಾ. ಪಿ. ವೆಂಕಟರಂಗಮ್ ಅವರ ಪ್ರಧಾನ ಪಾತ್ರವಿದೆ. ಸ್ವಾಮಿ ರಾಮಕೃಷ್ಣಾನಂದರು ಅವರಿಗೆ ಪತ್ರ ಬರೆದು ಶ್ರೀಮಾತೆಯ ಆಗಮನದ ಶುಭ ಸಮಾಚಾರವನ್ನು ತಿಳಿಸಿದರು. ೧೯೧೧ರಲ್ಲಿ ಶ್ರೀಮಾತೆ ಬೆಂಗಳೂರಿಗೆ ಆಗಮಿಸಿ ಬಸವನಗುಡಿಯ ಶ್ರೀರಾಮಕೃಷ್ಣ ಆಶ್ರಮದಲ್ಲಿ ಉಳಿದುಕೊಂಡಿದ್ದರು. ಬಹಳ ಮಂದಿ ಭಕ್ತರು ಬಂದು ಅವರನ್ನು ಸಂದರ್ಶಿಸಿದರು.

ಡಾ. ಪಿ. ವೆಂಕಟರಂಗಮ್ ತಮ್ಮ ಪತ್ನಿ ಹಾಗೂ ಇಬ್ಬರು ಹೆಣ್ಣುಮಕ್ಕಳನ್ನು (ಕನಕ ಮತ್ತು ಶಿವಾ) ಶ್ರೀಮಾತೆಯ ದರ್ಶನಕ್ಕೆ ಕಳಿಸಿದರು. ಸುನಂದಾದೇವಿ (ಕನಕ) ತಮ್ಮ ನೆನಪುಗಳನ್ನು ಹೀಗೆ ಬರೆಯುತ್ತಾರೆ: "ನಮ್ಮ ತಾಯಿಗೆ ಬಂಗಾಳಿ ಭಾಷೆ ತಿಳಿಯದು. ಶ್ರೀಮಾತೆಗೆ (ನಮ್ಮ ಮಾತೃಭಾಷೆಯಾದ) ತಮಿಳು ಗೊತ್ತಿಲ್ಲ. ಹೀಗಿದ್ದರೂ ಇಬ್ಬರೂ ಹಾಸ್ಯ ಮತ್ತು ಕೌತುಕಪೂರ್ಣ ಸಂಭಾಷಣೆಯಲ್ಲಿ ಮಗ್ನರಾದರು. ಇನ್ನೊಂದು ದಿನ ಮಾತುಕತೆಯಾಡುತ್ತಾ ತಮ್ಮ ಪುತ್ರಿಯರಿಬ್ಬರನ್ನೂ, ಶ್ರೀಮಾತೆಯ ಸೇವೆಗೆ ನಿಯುಕ್ತಮಾಡುವ ಇಚ್ಛೆಯನ್ನು ಪ್ರಕಟಿಸಿದರು. ನಾವಿಬ್ಬರೂ ಅಲ್ಪವಯಸ್ಕರಾದ್ದರಿಂದ (೧೩–೧೪ ವರ್ಷ) ಸ್ವಲ್ಪ ದೊಡ್ಡವರಾದ ಮೇಲೆ ಕಳಿಸಲು ಮಾತೆಯವರು ಹೇಳಿದರು.

"ಕೆಲವು ವರ್ಷಗಳ ನಂತರ, ೧೯೧೭ ನೇ ಇಸವಿ, ಅಕ್ಟೋಬರ್ ೧೩ ನೇ ತಾರೀಖು ನಾವಿಬ್ಬರೂ ಕೊಲ್ಕತಾ ತಲುಪಿದೆವು. ಶ್ರೀಮಾತೆಯವರ ಕೈಂಕರ್ಯದಲ್ಲಿ ನಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡು, ಸಂನ್ಯಾಸಿನಿಯರಾಗಿ ಜೀವನಯಾಪನೆ ಮಾಡುವುದೇ ನಮ್ಮ ಉದ್ದೇಶವಾಗಿತ್ತು. ಶ್ರೀಮಾತೆ ಆಗ ಜಯರಾಂಬಾಟಿಗೆ ಹೋಗಿದ್ದರು. ಸ್ವಾಮಿ ಶಾರದಾನಂದರೇ ನಮ್ಮ ಮಾರ್ಗದರ್ಶಕರಾಗಿ, ಬೇಲೂರುಮಠ ಮುಂತಾದ ಕಡೆ ನಮ್ಮನ್ನು ಕಳಿಸಿಕೊಟ್ಟರು. ನಾವಿಬ್ಬರೂ ಸೇರಿ ನಿವೇದಿತಾ ಸ್ಕೂಲಿನ ಮಕ್ಕಳಿಗೆ ಇಂಗ್ಲಿಷ್ ಕಲಿಸುತ್ತಿದ್ದೆವು. ೨–೩ ತಿಂಗಳಲ್ಲೇ ಸ್ವಲ್ಪ ಮಟ್ಟಿಗೆ ಬಂಗಾಳಿ ಕಲಿತೆವು. ಇಷ್ಟರಲ್ಲೇ ಶ್ರೀಮಾತೆ ಕೊಲ್ಕತಾಗೆ ಹಿಂದಿರುಗಿದರು. 'ನೀವಿಬ್ಬರೂ ಜಯರಾಂಬಾಟಿಗೆ ಬರುವಿರೆಂದು ನಿರೀಕ್ಷಿಸುತ್ತಿದ್ದೆ. ನೀವು ಬಾರದಿದ್ದರಿಂದ ನಾನೇ ಬಂದಿದ್ದೇನೆ' ಎಂದು ಹೇಳಿದರು. ಈ ಮಾತುಗಳಲ್ಲಿ ಕಂಡುಬರುತ್ತಿದ್ದ ಅವರ ವಾತ್ಸಲ್ಯದ ಸ್ಪರ್ಶ ಪಡೆದು ನಾವಿಬ್ಬರೂ ರೋಮಾಂಚಿತರಾದೆವು. ಪ್ರತಿದಿನವೂ ನಡೆದುಕೊಂಡೇ ನಿವೇದಿತಾ ಸ್ಕೂಲಿನಿಂದ ಉದ್ಬೋಧನ್‌ಗೆ ಹೋಗುತ್ತಿದ್ದೆವು. ಶ್ರೀಮಾತೆಗೆ ಅಲ್ಪಸ್ವಲ್ಪ ಸೇವೆ ಮಾಡುವ ಭಾಗ್ಯವೂ ನಮಗೆ ದೊರಕಿತು. ಒಮ್ಮೆ ಅವರ ಮುಂದೆ ತಮಿಳು ಭಾಷೆಯಲ್ಲಿ ಮಾತುಕತೆಯಾಡಿದೆವು. ಆಗ ಅವರು ಒಂದು ತಮಿಳು ಹಾಡು ಹಾಡಲು ಹೇಳಿದರು. ಆ ಹಾಡನ್ನು ಕೇಳಿ ಶ್ರೀಮಾತೆ ನಕ್ಕು ಆನಂದಿಸಿದರು. ಇನ್ನೊಮ್ಮೆ ರಾಧುವಿಗಾಗಿ 'ರಸಮ್' ಮಾಡಿ ಕಳಿಸಲು ಹೇಳಿದರು. ನಾನು ತಲೆನೋವಿನಿಂದ ಕಷ್ಟಪಡುವುದನ್ನು ನೋಡಿ, ನನ್ನ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ತೋರಿಸಿದರು.

"ಶ್ರೀಮಾತೆಯವರು ಜಯರಾಂಬಾಟಿಯಿಂದ ಹಿಂದಿರುಗಿದಾಗ ಮಂತ್ರದೀಕ್ಷೆಗಾಗಿ ಪ್ರಾರ್ಥಿಸಿಕೊಂಡೆವು. ಅವರು ತಕ್ಷಣವೇ ಒಪ್ಪಿಕೊಂಡರು. ೧೯೧೮, ಜೂನ್ ತಿಂಗಳ ರಥಯಾತ್ರೆಯಂದು ನಮಗಿಬ್ಬರಿಗೂ ದೀಕ್ಷೆಯಾಯಿತು. ಒಂದು ಸಲ ಅವರಿಂದ ಏನಾದರೂ ವಿಶೇಷ ಕೃಪೆಯನ್ನು ಗಳಿಸಬೇಕೆಂಬ ಇಚ್ಛೆಯಾಯಿತು. ಅಂದೇ ಸಂಜೆಯ ಹೊತ್ತಿನಲ್ಲಿ ಅವರನ್ನು ನೋಡಲು ಹೋದಾಗ ಸಂದೇಶವನ್ನು (ಒಂದು ಬಗೆಯ ಸಿಹಿ ತಿಂಡಿ) ಪ್ರಸಾದವಾಗಿ ಕೊಡುವಾಗ, ಅವರ ಕೈಜಾರಿ ಅದು ಪಾದದ ಮೇಲೆ ಬಿತ್ತು. ಅದನ್ನೇ ಎತ್ತಿ ನನಗೆ ಕೊಟ್ಟರು. ಇದು ಅವರ ವಿಶೇಷ ಕೃಪೆಯೆಂದು ನನಗೆ ಭಾಸವಾಯಿತು. ಹೀಗೆ ಎರಡು ವರ್ಷಗಳ ಕಾಲ ಕೊಲ್ಕತಾದಲ್ಲಿದ್ದು, ಎಲ್ಲರಿಂದಲೂ ಆಶೀರ್ವಾದ ಸ್ವೀಕರಿಸಿ, ನಾವು ಬೆಂಗಳೂರಿಗೆ ಹಿಂದಿರುಗಿ ಬಂದೆವು.

"ಅದಾಗಿ ಇಪ್ಪತ್ತು ದಿನಗಳು ಕಳೆಯುವಷ್ಟರಲ್ಲೇ ಶ್ರೀಮಾತೆ ತೀವ್ರವಾಗಿ ಅಸ್ವಸ್ಥರಾಗಿದ್ದಾರೆಂದು ಕೇಳಿ ಪುನಃ ಕೊಲ್ಕತಾಗೆ ಹೋದೆವು. ಹಾಸಿಗೆ ಹಿಡಿದಿದ್ದರೂ ಶ್ರೀಮಾತೆಯವರ ಮನಸ್ಸು ಮಾತ್ರ ಸದಾ ಜಾಗೃತವಾಗಿತ್ತು. ದಿನಗಳು ಕಳೆದಂತೆ ಅವರ ಆರೋಗ್ಯ ಕೆಡುತ್ತಲೇ ಹೋಯಿತು. ಉದ್ಬೋಧನದ ಮಹಿಳೆಯರೆಲ್ಲಾ ಸರದಿ ಪ್ರಕಾರ ಅವರಿಗೆ ಸೇವೆ ಸಲ್ಲಿಸುವ ವ್ಯವಸ್ಥೆಯಾಯಿತು. ನನಗೂ ಬೆಳಗ್ಗೆ ಎರಡು ಗಂಟೆಯಿಂದ ನಾಲ್ಕು ಗಂಟೆಯವರೆಗೆ ಸೇವೆ ಮಾಡುವ ಅವಕಾಶ ಲಭಿಸಿತು. ಅವರ ಮಹಾಸಮಾಧಿಗೆ ಮೂರು ದಿನ ಮುಂಚೆ ಅದೂ ನಿಂತುಹೋಯಿತು. ಕೇವಲ ದರ್ಶನಕ್ಕೆ ಮಾತ್ರ

ಅವಕಾಶ ಸಿಗುತ್ತಿತ್ತು. ಶ್ರೀಮಾತೆಯವರ ದೇಹತ್ಯಾಗವಾದ ನಂತರ, ಸಂಸ್ಕಾರವಾಗುವಾಗ ಅವರ ಶರೀರಕ್ಕೆ ಸ್ನಾನ ಮಾಡಿಸಿದೆವು. ಚಿತೆಗೆ ಅಗ್ನಿಸ್ಪರ್ಶ ಮಾಡಿದಾಗ, ಭಕ್ತ ಮಹಿಳೆಯರಿಗೂ ತುಪ್ಪದಿಂದ ಆಹುತಿ ಕೊಡುವ ಅವಕಾಶ ಸಿಕ್ಕಿತು. ಅದೇ ಅಂತಿಮ ದರ್ಶನ."


ಇವರಿಬ್ಬರನ್ನು ಕುರಿತು ಶ್ರೀಮಾತೆ ಒಮ್ಮೆ ಹೀಗೆ ಹೇಳುತ್ತಾರೆ: "ಮದ್ರಾಸಿನ ಇಬ್ಬರು ಅವಿವಾಹಿತ ಕನ್ಯೆಯರು ಇಲ್ಲಿದ್ದಾರೆ. ವಯಸ್ಸು ೨೦–೨೨. ಆಹಾ! ಎಷ್ಟು ಚೆನ್ನಾಗಿ ಕೆಲಸಕಾರ್ಯಗಳನ್ನು ಕಲಿತಿದ್ದಾರೆ! ಇಲ್ಲೇ ನೋಡಿ, ಎಂಟು ವರ್ಷ ವಯಸ್ಸಾಯಿತೋ ಇಲ್ಲವೋ ಮದುವೆಯ ಮಾತು ಆರಂಭಿಸಿಬಿಡುತ್ತಾರೆ. ಆಹಾ! ಈ ರಾಧುವಿಗೆ ವಿವಾಹ ಮಾಡದಿದ್ದರೆ ಇಷ್ಟು ಕಷ್ಟವಿರುತ್ತಿತ್ತೇ?"

### ೫. ಶಾರದಾದಾಸನ್

ಶ್ರೀಮಾತೆ ಮದ್ರಾಸ್ ಮಠವನ್ನು ಸಂದರ್ಶಿಸಿದಾಗ ಬಾಲಕನಾಗಿದ್ದ ಇವರು ತಮ್ಮ ತಂದೆತಾಯಿಗಳೊಡನೆ ಅವರನ್ನು ಸಂದರ್ಶಿಸಿದರು. ಶ್ರೀಮಾತೆಯವರ ಪ್ರೇಮವಾತ್ಸಲ್ಯ ಭಾಷೆಯ ತೊಡಕನ್ನು ಮರೆಸಿಬಿಟ್ಟಿತು. ಯಾವುದೋ ಅಪೂರ್ವ ಆಕರ್ಷಣೆಯಿಂದ ಸೆಳೆಯಲ್ಪಟ್ಟಂತೆ ಶ್ರೀಮಾತೆಯನ್ನು ಮತ್ತೆ ಮತ್ತೆ ಸಂದರ್ಶಿಸುವ ಇಚ್ಛೆಯಾಗುತ್ತಿತ್ತು. ಶಾರದಾದಾಸನ್ ಬರೆಯುತ್ತಾರೆ: "ನಮಗೂ ಶ್ರೀಮಾತೆಗೂ ಏನು ತಾನೇ ಸಾದೃಶ್ಯವಿದೆ! ಅವರ ಭಾಷೆ ನಮಗೆ ತಿಳಿಯದು. ಅವರು ದೈವಾಂಶಸಂಭೂತರು. ನಾವೋ ದೋಷಯುಕ್ತರಾದ ಸಾಧಾರಣ ವ್ಯಕ್ತಿಗಳು. ಆದರೂ ಎಂಥ ಆಕರ್ಷಣೆ! ನನ್ನ ತಂದೆತಾಯಿಗಳಿಬ್ಬರೂ ಅವರ ಬಳಿ ಮಂತ್ರದೀಕ್ಷೆ ತೆಗೆದುಕೊಂಡರು. ಶ್ರೀಮಾತೆ ಕೊಲ್ಕತಾಗೆ ಹಿಂದಿರುಗಿದಾಗ ಅವರಿಬ್ಬರೂ ಪಟ್ಟ ದುಃಖ ಅಸಹನೀಯವಾಗಿತ್ತು."

ಇದಾಗಿ ಕೆಲವು ವರ್ಷಗಳ ನಂತರ ಶಾರದಾದಾಸನ್ ತಮ್ಮ ತಾಯಿಯೊಂದಿಗೆ ಜಯರಾಂಬಾಟಿಗೆ ಹೋದರು. ಮೂರು ದಿವಸ ಅಲ್ಲಿ ಇದ್ದರು. ಅದೇ ಸಮಯದಲ್ಲಿ ಕಾಮಾರಪುಕುರಕ್ಕೂ ಹೋಗಿ ಶ್ರೀರಾಮಕೃಷ್ಣರ ಲೀಲಾಸ್ಥಾನಗಳನ್ನು ಸಂದರ್ಶಿಸಿದರು. ಶ್ರೀರಾಮಕೃಷ್ಣರು ಪೂಜಿಸಿದ ರಘುವೀರನ ವಿಗ್ರಹವನ್ನು ದರ್ಶಿಸಿದಾಗ, ತಾನೂ ಏಕೆ ರಘುವೀರನ ಪೂಜೆ ಮಾಡಬಾರದೆಂಬ ಇಚ್ಛೆ ಅವರಿಗೆ ಬಂತು. ಮರುದಿನ ಜಯರಾಂಬಾಟಿಯಲ್ಲಿ ಶ್ರೀಮಾತೆಯವರ ಮನೆಯ ಮುಂದೆ ನಿಂತು, ಅವರ ಸೋದರರೊಡನೆ ಮಾತುಕತೆಯಾಡುತ್ತಿದ್ದಾಗ, ಹಠಾತ್ತಾಗಿ ಮನೆಯೊಳಗಿನಿಂದ ಕರೆ ಬಂತು. ಕೇಳದೆಯೇ ಶ್ರೀಮಾತೆ ಕರೆದು ಶಾರದಾದಾಸನ್‌ಗೆ ಮಂತ್ರದೀಕ್ಷೆಯಿತ್ತರು. ಇನ್ನೂ ಆಶ್ಚರ್ಯಕರವಾದ ಸಂಗತಿಯೇನೆಂದರೆ, ಶ್ರೀರಾಮಪಟ್ಟಾಭಿಷೇಕದ ಚಿತ್ರವನ್ನು ತೋರಿಸಿ, ಆ ರೂಪದಲ್ಲೇ ಸೀತಾರಾಮರ ಧ್ಯಾನ ಮಾಡಲು ಹೇಳಿದರು. ಕಾಮಾರಪುಕುರದಲ್ಲಿ ಶಾರದಾದಾಸನ್ ಅವರ ಮನಸ್ಸಿನಲ್ಲಿ ಉಂಟಾದ ಬಯಕೆ ಶ್ರೀಮಾತೆಯವರಿಗೆ ತಿಳಿದದ್ದಾದರೂ ಹೇಗೆ? ಅಂತರ್ಯಾಮಿನಿಯಾದ ಶ್ರೀಮಾತೆ ಈ ವಿಧವಾಗಿ ಶಾರದಾದಾಸನ್ ಅವರ ಅಂತರಾಳದ ಬಯಕೆಯನ್ನು ಪೂರೈಸಿದರು ಎಂದು ಹೇಳಬಹುದೇ?

### ೬. ಆದಿಮೂಲಂ



ಶ್ರೀಮಾತೆ ಬೆಂಗಳೂರಿಗೆ ಬಂದಾಗ ಈತ ಬಾಲಕನಾಗಿದ್ದ. ಒಳಗೆ ಪ್ರವೇಶಿಸಲು ಧೈರ್ಯ ಸಾಲದೆ ಕಿಟಕಿಯಿಂದ ಇಣುಕಿ ನೋಡುತ್ತಿದ್ದ. ಕೆಳ ಜಾತಿಯ ಈ ಬಡ ಹುಡುಗನ ಮೇಲೆ ಕರುಣಾಮಯಿಯಾದ ಶ್ರೀಮಾತೆಯ ಕೃಪೆ ಹರಿಯಿತು. ಅವರು ಅತ್ಯಂತ ಪ್ರೀತಿಯಿಂದ ಅವನನ್ನು ಒಳಗೆ ಕರೆದು ಕೂದಲಿಗೆ ಎಣ್ಣೆ ಹಾಕಿ, ತಲೆ ಬಾಚಿ, ಹೊಸ ಬಟ್ಟೆ ಹಾಕಿ ಮಂತ್ರದೀಕ್ಷೆಯಿತ್ತರು. ತಾವು ಕೊಲ್ಕತಾಗೆ ಹೋಗುವ ಮೊದಲು, ಆ ಬಾಲಕನಿಗೆ ತಮ್ಮ ಚಿತ್ರಪಟವೊಂದನ್ನು ಕೊಟ್ಟು, ದೇವರಮನೆಯಲ್ಲಿಟ್ಟು ಪೂಜಿಸಲು ಹೇಳಿದರು. ದೊಡ್ಡವರಾದ ಮೇಲೆ ಆದಿಮೂಲಂ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಕುಟುಂಬಜೀವನ ನಡೆಸುತ್ತಿದ್ದರೂ ಹಲವು ವಿಧದಲ್ಲಿ ಬೆಂಗಳೂರು ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮರಣ ಹೊಂದುವುದಕ್ಕೆ ಸ್ವಲ್ಪಹೊತ್ತಿನ ಮುಂಚೆ, ರಾತ್ರಿ ಹೊತ್ತು ಮಲಗುವ ಕೋಣೆಯ ಪಕ್ಕವೇ ಇದ್ದ ದೇವರ ಮನೆಗೆ ಹೋಗಿ, ಶ್ರೀಮಾತೆಯವರ ಚಿತ್ರದ ಮುಂದೆ ಸಾಷ್ಟಾಂಗ ಪ್ರಣಾಮ ಮಾಡಿದವರು, ಮತ್ತೆ ಏಳಲೇ ಇಲ್ಲ. •